## <u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂಃ 164/2015 ಸಿಡಬ್ಲೂ: 5 ಪಿಡಬ್ಲೂ: 3

ಪ್ರಮಾಣವಚನ ಬೋಧಿಸಲಾಯಿತು ದಿಃ 17-06-2025

ಹೆಸರು : ಬಸಮ್ಮ

ಗಂಡ ಹೆಸರು : ವೈದ್ಯನಾಥ

ವಯಸ್ಸು : 65 ವರ್ಷ

ಉದ್ಯೋಗ : ಮನೆ ಕೆಲಸ

ವಾಸಸ್ಥಳ : ಬೀದರ್

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ಚಾಸಾ 1 ನನ್ನ ಅಕ್ಕ. ಚಾ ಸಾ 4 ನನ್ನ ಅಕ್ಕ. ಸದರಿಯವರು ತೀರಿಕೊಂಡಿರುತ್ತಾರೆ. ಆರೋಪಿತರು ನನಗೆ ಗೊತ್ತು. ಸರ್ವೆ ನಂ. 643 ರಲ್ಲಿ ಆರೋಪಿತರು ಎಣ್ಣೆ ಹೊಡೆದು ತೊಗರಿ ಬೆಳೆ ನಾಶ ಪಡಿಸಿರುತ್ತಾರೆ. ನಾನು ಆಗ ಹೋಲಕ್ಕೆ ಹೋಗಿಲ್ಲ. ಸದರಿ ವಿಷಯ ನನಗೆ ಚಾಸಾ 1 ರವರು ತಿಳಿಸಿರುತ್ತಾರೆ. ಆರೋಪಿತರು ಎಣ್ಣೆ ಹೊಡೆಯುವುದರಿಂದ ಎಷ್ಟು ಬೆಳೆ ನಾಶ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ನಾನು ಈ ಬಗ್ಗೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಆರೋಪಿತರು ನನಗೆ ರಂಡಿ ಬೋಸಡಿ ಅಂತಾ ಬೈದಿರುತ್ತಾರೆ. ಸದರಿ ಘಟನೆ ಯಾವ ದಿನಾಂಕ ದಂದು ಹಾಗೂ ಯಾವ ಸಮಯ ಆಗಿದೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಭಾಗಷಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**<u>ವಾಟೀಸವಾಲುಃ</u>** ಮಾನ್ಯ ಸ.ಸ.ಅ ರವರಿಂದ:

ದಿ.12-08-2014 ರಂದು ಚಾ ಸಾ 9 ರವರು ಸೇಡಂ ನಿಂದ ಖೋಡ್ಲಾಕ್ಕೆ ಹೊಲಕ್ಕೆ ಬಂದಾರಿಗೆ ಮುಳ್ಳು ಹಚ್ಚಿ ಬರಲು ಹೋಗಿದ್ದರು ಎಂದರೆ ಸರಿ. ನಂತರ 14-08-2014 ಮದ್ಯಹ್ನ 01-00 ಗಂಟೆ ಸುಮಾರಿಗೆ ಚಾ ಸಾ 1 ಮತ್ತು 4 ಇಬ್ಬರೂ ಕೂಡಿ ಹೋಗಿ ನೋಡಲಾಗಿ ಹೋಲದಲ್ಲಿ ಅಕ್ರಮವಾಗಿ ಪ್ರವೇಶ ಮಾಡಿ ಎರಡು ಎಣ್ಣೆ ಹೊಡೆಯುವ ಡಬ್ಬಿಯಿಂದ ಯಾವುದೋ ಒಂದು ಕಳೆ

ನಾಶಕ ಔಷದ ಸಿಂಪಡಿಸಿದರು ಎಂದರೆ ಸರಿ. ಆಗ ಚಾ ಸಾ 1 ರವರು ಎಣ್ಣೆ ಯಾಕೆ ಹೋಡೆಯುತ್ತಿದ್ದೀರಿ ಅಂತಾ ಕೇಳಿದಕ್ಕೆ 1 ನೇ ಆರೋಪಿತನು ಅವಾಚ್ಯ ಶಬ್ದಗಳಿಂದ ಬೈದಿದ್ದನು ಎಂದರೆ ಸರಿ. ಅದೇ ರೀತಿ ನಿನ್ನ ಹೋಲ ಬೆಳೆಯಲು ಬಿಡುವುದಿಲ್ಲ ಎಣ್ಣೆ ಹೋಡೆದು ನಾಶ ಮಾಡುತ್ತೇವೆ ಏನು ಮಾಡಿಕೊಳ್ಳುತ್ತೀಯ ಮಾಡಿಕೋಹೋಗು ಅಂತಾ ಬೈದಿರುತ್ತಾರೆ ಎಂದರೆ ಸರಿ. ಅದೇ ರೀತಿ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ .

**ಪಾಟೀಸವಾಲುಃ** ಆರೋಪಿ ಪರ ಶ್ರೀ ಬಿ ಟಿ ವಕೀಲರಿಂದ:

ನಾನು ಈ ಘಟನೆ ಕುರಿತು ಏನು ಗೊತ್ತಿಲ್ಲ. ನಾನು ಘಟನಾ ಸ್ಥಳಕ್ಕೆ ಹೋಗಿಲ್ಲ. ಸರ್ವೆ ನಂ. 643 ನೇದ್ದಕ್ಕೆ ಹಾಗೂ ನಮಗೆ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಿಲ್ಲ. ಸದರಿ ಸರ್ವೆ ನಂ. ಆರೋಪಿತರ ಕಬ್ಜೆಯಲ್ಲಿ ಇರುವುದರಿಂದ ಸುಳ್ಳು ಕೇಳು ಹಾಕಿ ಕಬ್ಜೆ ತೆಗೆದುಕೊಳ್ಳಲು ಪ್ರಯತ್ನಿಸುತ್ತಿದ್ದೆವು ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೇ. ಸರಿ. ಇದೆ.

**ಪ್ರ. ದ. ನ್ಯಾ. ದಂ. ಸೇಡಂ.**